ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಇ-ಆಡಳಿತ- ಡೈಸ್ ಕೋಡ್ 01/2010-2011 ದಿ:17-04-2010

# **ಸುತ್ತೋಲೆ**

ವಿಷಯ: ಡೈಸ್ ಕೋಡ್ ಇಲ್ಲದ ಶಾಲೆಗಳಿಗೆ ಡೈಸ್ ಕೋಡ್ ನೀಡುವ ಬಗ್ಗೆ

-0-0-0-

2010-11 ನೇ ಸಾಲಿನಲ್ಲಿ ಪಠ್ಯ ಪುಸ್ತಕಗಳ ಬೇಡಿಕೆಯನ್ನು ಆನ್-ಲೈನ್ ಮೂಲಕ ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ಈ ವ್ಯವಸ್ಥೆಯಲ್ಲಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ಪಠ್ಯಪುಸ್ತಕಗಳಿಗೆ ಬೇಡಿಕೆ ಸಲ್ಲಿಸುವಾಗ ಶಾಲೆಯ ಡೈಸ್ ಕೋಡ್ ನಮೂದಿಸುವುದು ಅಗತ್ಯವಾಗಿದೆ. ಆದರೆ ಕೆಲವು ಶಾಲೆಗಳಿಗೆ ಡೈಸ್ ಕೋಡ್ ಇಲ್ಲದಿರುವುದರಿಂದ ಪಠ್ಯ ಪುಸ್ತಕಗಳಿಗೆ ಬೇಡಿಕೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲದಿರುವ ಬಗ್ಗೆ ಬ್ಲಾಕ್‌ಗಳಿಂದ ತಿಳಿದು ಬಂದಿದೆ. ಡೈಸ್ ಕೋಡ್ ಇಲ್ಲದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ಡೈಸ್ ಕೋಡ್‌ನ್ನು ದಿ:28-04-2010ರ ಒಳಗಾಗಿ ನೀಡಿ, ಈ ಪತ್ರದೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಮಾಹಿತಿಯನ್ನು ssadise@gmail.com ಅಥವಾ softwaredevelopmentcentre@gmail.com ಗೆ ಕಳುಹಿಸುವುದು.

ಇದನ್ನು ಅತ್ಯಾದ್ಯತೆ ಎಂದು ಪರಿಗಣಿಸಿ ಲಗತ್ತಿಸಿರುವ ಎಕ್ಸೆಲ್ ನಮೂನೆ ಭರ್ತಿ ಮಾಡಿ ಡೈಸ್ ಕೋಡ್ ನೀಡುವಲ್ಲಿ ಕ್ರಮ ವಹಿಸುವುದು. ಈ ಕುರಿತಂತೆ ಯಾವುದೇ ಶಾಲೆಗೆ ಡೈಸ್ ಕೋಡ್ ನೀಡದಿದ್ದಲ್ಲಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೇರವಾಗಿ ಹೊಣೆಗಾರರಾಗಿರುತ್ತಾರೆ.

17/4/10

**ನೋಡಲ್ ಅಧಿಕಾರಿಗಳು, ಇ-ಆಡಳಿತ**
ಹಾಗೂ ಸಹನಿರ್ದೇಶಕರು(ಆಡಳಿತ)
ಸರ್ವ ಶಿಕ್ಷಣ ಅಭಿಯಾನ

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು ಇವರಿಗೆ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ
3. ಕಛೇರಿ ಪ್ರತಿ.

| Sl.No. | Bolck Name | DISE School Code | School Name | Village Name | School Management Code | School Category Code | Lowest Class | Highest Class |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |